


International Journal of Kannada Research
www.kannadajournal.com

**ISSN: 2454–5813**
IJKR 2021; 7(4): 203-206
© 2021 IJKR
www.kannadajournal.com
Received: 07-06-2021
Accepted: 16-08-2021

**Dr. Swetharani H**
HOD, Department of Kannada, Seshsdaripuram Pre University College #05 CA Chaitanya Bharati Veerasagara layout Melekote road Gangasandra, Tumkur, Karnataka, India

**Corresponding Author:**
**Dr. Swetharani H**
HOD, Department of Kannada, Seshsdaripuram Pre University College #05 CA Chaitanya Bharati Veerasagara layout Melekote road Gangasandra, Tumkur, Karnataka, India

# ಪವಾಡ ಪುರುಷ ಮಂಟೇಸ್ವಾಮಿ

**Dr. Swetharani H**

ಜನಪದ ಮಹಾಕಾವ್ಯ: ಹಲವು ಸಾಹಿತ್ಯ ಪ್ರಕಾರಗಳಲ್ಲಿ ಜನಪದ ಮಹಾಕಾವ್ಯವೂ ಒಂದು. ಈ ಜನಪದ ಮಹಾಕಾವ್ಯಗಳು ಆಯಾಕಾಲಘಟ್ಟದಲ್ಲಿ ಜೀವಿಸಿದ್ದರು ಎನ್ನಲಾಗುವ ವ್ಯಕ್ತಿಗಳ ಪವಾಡ ಮತ್ತು ಅತಿಮಾನುಷ ಶಕ್ತಿಗಳನ್ನು ಹೊಗಳುವ ಅವರವರ ಮನೋಧರ್ಮಗಳಿಗೆ ಅನುಗುಣವಾಗಿ ಹುಟ್ಟಿಕೊಂಡಿವೆ. ಹಾಡಲು ಸುಲಭವಾದಂತಹ ಪದ್ಯರೂಪಿ ರಚನೆಗಳು ಇವಾಗಿದ್ದು ಮೌಖಿಕವಾಗಿ ತಲೆಮಾರಿನಿಂದ ತಲೆಮಾರಿಗೆ ಹರಿದು ಬಂದಿವೆ. ಬರಹ, ಮುದ್ರಣಗಳ ಅವಲಂಬನವಿಲ್ಲದೆ, ಶೂದ್ಧವಾಗಿ ವಾಕ್ಪರಂಪರೆಯಲ್ಲಿ ಹುಟ್ಟಿ, ಬೆಳೆದು ಬಂದದ್ದು, ಜನಪದ ಗೀತೆ. ಈ ಹುಟ್ಟು ಬೆಳವಣಿಗೆಗಳಿಗೆ ಕಾರಣವಾದವರು ಅನಕ್ಷರಸ್ಥರಾದ, ಪಂಡಿತರಲ್ಲದ ಸಾಮಾನ್ಯ ಜನ ಇಂತಹ ಸಾಮಾಣ್ಯ ವರ್ಗದ ಮೌಖಿಕ ಸಾಹಿತ್ಯವನ್ನು ಸಂಗ್ರಹಿಸುವ ಕಾರ್ಯಜನಪದ ವಿದ್ವಾಂಸರಿಂದ ನಡೆಯಿತು. ಅದರ ಪ್ರತಿಫಲವೇ ನಾವು ಇಂದು ಅಭ್ಯಸಿಸುತ್ತಿರುವ ಜನಪದ ಸಾಹಿತ್ಯವಾಗಿದೆ.

ಜನಪದ ಮಹಾಕಾವ್ಯ ಎಂದರೇನು ? ಎಂಬ ಪ್ರಶ್ನೆಯನ್ನು ನೋಡುವುದಾದರೆ ಅದಕ್ಕೆ ಬೆಕ್‌ಬ್ರೆಂಡ್ ಹೀಗೆ ಇತ್ತರಿಸುತ್ತಾರೆ. ಮಹಾಕಾವ್ಯವೆಂದರೆ ಒಂದು ಉತ್ಕೃಷ್ಟ ಕಥೆ ಅದೊಂದು ಜನಪದ ಪ್ರಕಾರವಾಗಿದ್ದು ಮೊದಲದರ್ಜೆಯ ನಿರೂಪಣಕಾವ್ಯ ಎನಿಸಿಕೊಳ್ಳುತ್ತದೆ. ಒಂದು ಉತ್ಕೃಷ್ಟ ಕಥೆಯೊಂದಿಗೆ ಉತ್ತಮ ವಾಚನ ಶೈಲಿಯನ್ನು ಹೊಂದಿರುತ್ತದೆ. ಇಂತಹ ಮಹಾಕಾವ್ಯ ತನ್ನದೆ ಆದ ಕೆಲವು ಲಕ್ಷಣಗಳನ್ನು ಒಳಗೊಂಡಿದೆ.

೧. ಜನಪದ ಮಹಾಕಾವ್ಯಗಳ ಲಕ್ಷಣ ಮತ್ತು ಸ್ವರೂಪ. ಪ್ರೊ. ಸಿ.ಪಿ. ಕೃಷ್ಣಕುಮಾರ್ ಪು.ಸಂ.೧ ಕರ್ನಾಟಕ ಜನಪದ ಮಹಾಕಾವ್ಯಗಳು. ಸಂ.ತಿ.ನಂ.ಶಂಕರನಾರಾಯಣ
೨. ಅದೇ ಪು.ಸಂ. ೧೫ ಕರ್ನಾಟಕ ಜಾನಪದ & ಯಕ್ಷಗಾನ ಅಕಾಡೆಮಿ

**ಮಹಾಲಕ್ಷಣಗಳು**

೧. ಮಹಾಕಾವ್ಯವನ್ನು ಹಾಡುವವರ ವೃತ್ತಿ ಗಾಯನವಾಗಿರುತ್ತದೆ. ವಾಚನ ಪರಂಪರೆಯನ್ನು ಈ ಗಾಯಕರು ಮುಂದುವರೆಸುತ್ತಾರೆ.
೨. ಹಾಡಲು ಅನುಕೂಲವವಾಗಿರುತ್ತದೆ ಮತ್ತು ಕಾವ್ಯ ಧೀರ್ಘವಾಗಿರುತ್ತದೆ ಒಂದು ರೀತಿಯ ಹಾಡ್ಗತೆಗಳೆನ್ನಬಹುದು.
೩. ಮಹಾಕಾವ್ಯ ನಾಯಕರು ಸ್ಥಳೀಯವಾಗಿ ಪೂಜನೀಯವಾಗಿರುವ ದೈವಿ ಸ್ವರೂಪವನ್ನು ಪಡೆದಿರುತ್ತಾರೆ. ಇಂತಹ ದೈವಿ ಸ್ವರೂಪದ ವ್ಯಕ್ತಿಗಳ ಪವಾಡ ಮತ್ತು ಇತರೆ ಗುಣಗಳನ್ನು ರಂಜನೀಯವಾಗಿ ಹಾಡುತ್ತಾರೆ.
೪. ಸಾಂಸ್ಕೃತಿಕವಾಗಿ ಈ ಕಾವ್ಯ ಮಹತ್ವ ಪಡೆದಿರುತ್ತದೆ. ಕಾಲಾತೀತವಾದ ಚಲನೆಯನ್ನು ಮಹಾಕಾವ್ಯದಲ್ಲಿ ಕಾಣಬಹುದು.
೫. ಈ ಕಾವ್ಯಗಳಲ್ಲಿ ನಿರೂಪಿತವಾಗಿರುವ ಘಟನೆಗಳೆಲ್ಲ ಒಂದು ಕಾಲದಲ್ಲಿ ನಡೆದಿರುವ ನಿತ್ಯ ಘಟನೆ ಎಂಬ ನಂಬಿಕೆ ಗಾಯಕರದ್ದು ಹಾಗೂ ಕೇಳುಗರದ್ದಾಗಿರುತ್ತದೆ.
೬. ಒಂದು ನಿರ್ದಿಷ್ಟ ಸಮಯ ಅಥವಾ ಆರಾದಣಾ ಸಮಯದಲ್ಲಿ ವೃತ್ತಿಗಾಯಕರನ್ನು ಕರೆಸಿ ವಾಚಿಸುತ್ತಾರೆ. ಕೆಲವೊಮ್ಮೆ ಗಾಯಕರ ಕುಲಕಸುಬಾಗಿ ಮಹಾಕಾವ್ಯಗಳ ಪ್ರಸಾರ ಸಾಗುತ್ತದೆ.

೭. ಒಂದು ನಿರ್ದಿಷ್ಟ ಬುಡಕಟ್ಟು ಅಥವಾ ಸಮುದಾಯದವರು ಈ ಪೌರಾಣಿಕ ಮಹತ್ವ ಹೊಂದಿರುವ ವೀರರ ಕಥೆಯನ್ನು ಕೇಳಿಸ್ತಾರೆ ಮತ್ತು ಆರಾಧಿಸುತ್ತಾರೆ.
೮. ಮಹಾಕಾವ್ಯಗಳಲ್ಲಿ ವರ್ಣನೆ (ಹೆಚ್ಚಾಗಿರುತ್ತವೆ) ಪ್ರಧಾನವಾಗಿರುತ್ತವೆ.

ಮಹಾಕಾವ್ಯಗಳೆಂದರೆ ಕೇವಲ ರಾಮಾಯಣ, ಮಹಾಭಾರತಗಳಷ್ಟೇ ಅಲ್ಲ. ಭಾರತದ ಮಟ್ಟಿಗೆ ನೋಡುವುದಾದರೆ ಪ್ರತಿಯೊಂದು ಪ್ರದೇಶಕ್ಕೂ ತನ್ನದೇ ಆದ ಸಂಸ್ಕೃತಿ ಇದೆ. ತನ್ನದೇ ಆದ ನೆಲಮೂಲ ಗುಣವಿದೆ. ಹಾಗೆಯೇ ತನ್ನ ಪರಂಪರೆಯಿಂದ ರೂಪತಳೆದ ದೈವಿಪುರುಷರ, ಸಾಂಸಕೃತಿಕ ನಾಐಕರ ಕುರಿತಾದ ಮೌಖಿಕ ಕಾವ್ಯಗಳಿವೆ. ಕರ್ನಾಟಕದಲ್ಲಿ ಪ್ರಚಲಿತದಲಲಿರುವ ಪ್ರಮುಖ ಜನಪದ ಕಾವ್ಯಗಳೆಂದರೆ

೧. ಜುಂಜಪ್ಪ ಮಹಾಕಾವ್ಯ
೨. ಸಿರಿಪಾಡ್ದನ (ತುಳುನಾಡಿನಲ್ಲಿರುವ) ಕೋಟಿ ಚೆನ್ನಯ್ಯ ಪಾಡ್ದನ,
೩. ಎಲ್ಲಮ್ಮ ಮಹಾಕಾವ್ಯ
೪. ಹಾಲುಮತ ಮಹಾಕಾವ್ಯ
೫. ಮಲೇ ಮಾದೇಶ್ವರ ಕಾವ್ಯ
೬. ಮಂಟೇಸ್ವಾಮಿ ಕಾವ್ಯ ಮುಖ್ಯವೆನಿಸಿರುತ್ತವೆ.

ಮಲೇ ಮಾದೇಶ್ವರ ಕಾವ್ಯವನ್ನು ಹಾಡುವವರನ್ನು ಕಂಸಾಳೆಯವರು ಮಾದೇಶ್ವರ ಗುಡ್ಡರು ಎಂದು ಕರೆಯುವಂತೆ ಮಂಟೇಸ್ವಾಮಿ ಕಾವ್ಯವನ್ನು ಹಾಡುವವರನನು ನೀಲಗಾರರು, ಲಿಲೇಗಾರರು ಅಥವಾ ಮಂಟೇದಯ್ಯಗಳು ಎಂದು ಕರೆಯಲಾಗುತ್ತದೆ. ಕರ್ನಾಟಕದ ದಕ್ಷಿಣ ಭಾಗದ ಸೋಲಿಗರು, ಕುರುಬರು, ಬೇಡರು, ಉಪ್ಪಾರರು ಹಾಗೂ ಆದಿ ಕರ್ನಟಕ ಮತ್ತು ಆದಿ ದ್ರಾವಿಡರೂ ಈ ಕಥನವನ್ನು ಹಾಡುವವರಗಿದ್ದಾರೆ. ಇವರನ್ನೇ ನೀಲಗಾರರು ಅಥವಾ ಲೀಲೆಗಾರರೆಂದು ಕರೆಯುತ್ತಾರೆ. ತಂಬೂರಿ, ತಾಳ, ಗಗ್ಗರ, ದಮ್ಮಡಿ, ಇವರ ವಾದ್ಯಗಳು,

**ಮಂಟೆಸ್ವಾಮಿ ಕಾವ್ಯದಲ್ಲಿ**

- ಜಗತ್ತು ಸೃಷೀಯ ಸಾಲು
- ಕಲ್ಯಾಣ ಪಟ್ಟಣದ ಸಾಲು
- ರಾಚಪ್ಪಾಜಿ ಸಾಲು
- ಬೊಪ್ಪಗೌಡನ ಪುರದ ಸಾಲು
- ಫಲಾರದಯ್ಯನ ಸಾಲು
- ಕೆಂಪಾಚಾರಿ ಸಾಲು
- ಸಿದ್ದಪ್ಪಾಜಿ ಸಾಲು (ಕಬ್ಬಿಣದ ಸಾಲು)
- ಕಲಿಪುರುಷನ ಸಾಲು ಎಂದು ಒಂದೊಂದು ಪವಾಡ ಅಥವಾ ಸಂಗತಿಗಳನನು ಕುರಿತ ಸಾಲುಗಳನ್ನು ಹಾಡುತ್ತಾರೆ.

ಅಸಮಾನತೆಯ ವಿರುದ್ಧ ಹೋರಾಟಕ್ಕೆ ನಾಂದಿಯಾಡಿದ ಶರಣ ಚಳವಳಿಯ ತವರಾದ ಕಲ್ಯಾಣದಿಂದ ಮಂಟೇಸ್ವಾಮಿಯ ಇತಿಹಾಸ ಪ್ರಾರಂಭವಾಗುತ್ತದೆ. ಮಂಟೇಸ್ವಾಮಿಯನ್ನು ಧರೆಗೆ ದೊಡ್ಡವರು ಎಂದು ಕರೆಯುತ್ತಾರೆ. ಮಂಟೇಸ್ವಾಮಿ ಜಗತ್ತಿನ ಸೃಷ್ಟಿಕರ್ತನಾಗಿ ಕಾಣುತ್ತಾನೆ. ಸೂರ್ಯ, ಚಂದ್ರ, ಭೂಮಿಯನ್ನು ತನ್ನ ಸ್ವಾಧಿನಕ್ಕೆ ಪಡೆದು ಬ್ರಹ್ಮಾಂಡವನ್ನೇ ಸೃಷ್ಟಿಸಬಲ್ಲ ಮಾಯಕಾರನಾಗುತ್ತಾನೆ. ಜಗತ್ತನ್ನು ಸೃಷ್ಟಿಸಿದ ಬಳಿಕ ಕಲ್ಯಾಣಕ್ಕೆ ಮಂಟೇಸ್ವಾಮಿಯ ಆಗಮನವಾಗುತ್ತದೆ. ವಚನ ಚಳವಳಿಯ ನೇತಾರ ಬಸವಣ್ಣನ ಗುರುವಿನ ಸ್ವರೂಪದಲ್ಲಿ ಮಂಟೇಸ್ವಾಮಿ ಚಿತ್ರಣಗೊಂಡಿದ್ದಾನೆ. ಕಲ್ಯಾಣದಲ್ಲಿದ್ದ ಡಾಂಭಿಕ ಭಕ್ತಿಯನ್ನು ಬಯಲು ಮಾಡುತ್ತಾನೆ. ಬಸವಣ್ಣನಿಗೆ ನಿಜ ಭಕ್ತರ ದರ್ಶನ ಮಾಡಿಸುತ್ತಾನೆ. ಅಲ್ಲಿ ರಾಚಪ್ಪನನನು ಶಿಶುಮಗನಾಗಿ ಸ್ವೀಕರಿಸಿ ಹೊರಡುತ್ತಾನೆ. ಕೊಡೆಕಲ್ಲಿಗೆ ಬಂದು ಅಲ್ಲಿಂದ ವಿಜಯನಗರದ ಪಟ್ಟಣದಲ್ಲಿ ಗಾರುಡಿಗರನ್ನು ಸೋಲಿಸಿ ಮುಂದೆ ಕಾಗಿನೆಲೆಯ ದೊಡ್ಡಮ್ಮ ತಾಯಿಯನ್ನು ಶಿಶುಮಗಳನ್ನಾಗಿಕೊಂಡ ಸಖರಾಯ ಪಟ್ಟಣದ ಬಸವರಾಜೆಂದ್ರ ಮತ್ತು ವೀರಭದ್ರಸ್ವಾಮಿಗಳನ್ನು ಶಿಶುಮಕ್ಕಳಾಗಿ ಸ್ವೀಕರಿಸಿ ಚನ್ನಪಟ್ಟಣದ ಹೊನ್ನಾಯ್ಕನ ಹಳ್ಳಿಯ ಮುದ್ದಮ್ಮನಿಂದ ಹಾಳಾದ ಮಂಟೇದ ಒಡೆಯರೇ ಮುಂದೆ ಹೋಗಿ ಎಂದಾಗ ಮಂಟೇದ ಲಿಂಗಯ್ಯ ಎಂಬ ನಾಮವನ್ನು ಪಡೆದು ಮುಂದೆ ಬೊಪ್ಪಗೌಡನಪುರಕ್ಕೆ ಬರುತ್ತಾನೆ. ಒಂದು ರಾತ್ರಿ ತಂಗಲು ಹಟ್ಟಿಯಲ್ಲಿ ಜಾಗ ಕೇಳಿದಾಗ ಕುರಿದೊಡ್ಡಿಗೆ ಕಳುಹಿಸುತ್ತಾನೆ. ಆಗ ಮಂಟೇಸ್ವಾಮಿ ಒಂದು ಚಿಟಿಕೆ ಮಾಯದ ಬೂದಿಯನ್ನು ಏಳು ಸೊಲಿಗೆ ಕುರಿಯ ಮೇಲೆ ಉರುಬಲು ಕುರಿಗಳೆಲ್ಲ ಸತ್ತು ಮಲಗಿದವು. ಬೊಪ್ಪೆಗೌಡ ಆಗ ಮಂಟೇಸ್ವಾಮಿಗೆ ಶರಣಾಗುತ್ತಾನೆ. ಮುಂದೆ ಮಂಟೆಸ್ವಾಮಿಗಳು ಕಾಡಂಕನಹಳ್ಳಿ ಮಡಿವಾಳ ಮಾಚಯ್ಯನ ಉಬ್ಬೆ ಒಲೆಯನನು ಗುರುಮಠವಾಗಿಯೂ, ಅವನು ಕತ್ತೆಕಟ್ಟುವ ಕೊಟ್ಟಿಗೆಯನ್ನು ಚಂದ್ರಶಾಲೆಯಾಗಿ ಮಾಡಿಕೊಂಡು ನೆಲೆಸುತ್ತಾರೆ. ಅಲ್ಲಿಂದ ಮುಂದೆ ನಿಡುಗಟ್ಟದ ಮುದ್ದೋಜಿಯನ್ನು ಅವನ ಆರುಜನ ಗಂಡು ಮಕ್ಕಳಲ್ಲಿ ಕೊನೆಯವನಾದ ಕೆಂಪಾಚಾರಿಯನ್ನು ಕ್ವಾರಣ್ಯ ಕೆಳುತ್ತಾರೆ ಮುದ್ದೋಜಿ ಕುಪಿತನಾಗಿ ಅವರನ್ನು ಆಚೆ ತಳ್ಳಿಸುತ್ತಾನೆ. ಕೆಂಪಾಚಾರಿಯ ದೃಢತೆಯನ್ನು ಪರೀಕ್ಷಿಸಲು ಮುಂದಾಗುತ್ತಾರೆ ಚಾಲಕ ಕೆಂಪಚಾರಿ ಬಹಳ ಸೊಕ್ಕಿನ ಮಾತನ್ನಾಡುತ್ತಾನೆ. ಕುಪಿತಗೊಂಡ ಮಂಟೇಸ್ವಾಮಿ ಕುಂಡುಮಾರಿ ಯನ್ನು ಮುದ್ದೋಜಿಯ ಮನೆಗೆ ನುಗ್ಗುವಂತೆ ಮಾಡುತ್ತಾರೆ. ಮಾರಿಹೊಕ್ಕ ಮನೆ ಮಸಣವಾಗುತ್ತದೆ. ಕಟಂಪ್ಪಣ್ಣನಿಗೆ ಹುಚ್ಚು ಬೆಪ್ಪಿನ ಜ್ಞಾನ ಕೊಡುತ್ತಾರೆ. ಅವನು ಈದುಲಿಯೋದಿಗೆ ಹೈಲಾಟ ಆಡುವಾಗ ಗುರು ಈಗಲಾದರು ಶಿಷ್ಯನಾಗ್ತಿಯಾ ಎಂದು ಕೆಳುತ್ತಾರೆ. ನಿಮ್ಮಂಗೆ ನನ್ನನ್ನು ತಿರುಕನ ಮಾಡ್ತಿರ ? ಅಂದ ಕೆಂಪಾಚಾರಿಗೆ ನೀಲಿಗ್ಯಾನಕೊಟ್ಟು ಬರಗನ ಮೇಲೆ ಕೂರಿಸಿದರು. ಅದು ಆಕಾಶಕ್ಕೆ ಹಾರಿ ಚಂದ್ರಮಂಡಲಕ್ಕೆ ಸೂರ್ಯ ಮಂಡಲ ಸುತ್ತಿಸಿ ಕೆಳಗಿಳಿಸಿ ಕಾಳಿಂಗ ಗವಿಯಲ್ಲಿ ಕೂಡಿಹಾಕುತ್ತಾರೆ. ಹನ್ನೆರಡು ವರ್ಷದ ನಂತರ ಗುರುಗಳ ಆದೇಶದ ಮೇರೆಗೆ ಮಡಿವಾಳ ಮಾಚಯ್ಯ “ ಧರೆಗೆ ದೊಡ್ಡವರ ಮಠದ ಘನನೀಲಿ ಸಿದ್ದಯ್ಯ ಸ್ವಾಮಿ ಬನ್ನಿ ಎಂದಾಗ ಮೂಗುತ್ತ ಒಡೆದು ನೆತ್ತಿಯ ಮೇಲಿನ ಬೆಟ್ಟ ಹೊಡೆದು ಬೊಪ್ಪೆಗೌಡನಪುರಕ್ಕೆ ಬರುತ್ತಾರೆ. ಸಿದ್ದಯ್ಯ ಸ್ವಾಮಿ ಎಂದು ನಾಮಕರಣ ಮಾಡಿ ಮಾರಿ ಮಸಣಿಯರಿಗೆ ಗಂಡನ ಮಾಡಿ ನಿಲ್ಲಿಸುತ್ತಾರೆ. ಜಗತ್ತು ಸೃಷ್ಟಿಸಿದ ಮಂಟೇಸ್ವಾಮಿ ಕಲಿ ಅವತಾರವಾದ ಅವನನ್ನು ನೋಡಲಾರೆ ಎಂದು ಪಾತಾಳಬಾವಿಯಲ್ಲಿ ಮಿಶ್ರಮಿಸಲು ನಿರ್ಧರಿಸುತ್ತಾರೆ. ಬಾವಿ ತೊಡಲು ಕಬಬಿಣದ ಸಲಕರಣೆ ತರಲು ಸಿದ್ದಪ್ಪಾಜಿಯನ್ನು ಹಲಗೂರಿಗೆ ಕಳುಹಿಸುತ್ತಾರೆ.

ಹಲಗೂರಿನಲ್ಲಿ ಏಳುನೂರು ಒಕ್ಕಲು ಮಕಕ್ಕೆಗೆ ಏಳುಮಂದಿ ಪಾಂಚಾಳರು ಧಣಿಗಳು. ಕಬ್ಬಿಣದ ಕ್ವಾರಣ್ಯ ಕೆಳಿದ ಸಿದ್ದಪ್ಪಾಜಿಯನು ಯಾರು ಲಕ್ಷಿಸಲಿಲ್ಲ. ಕಡೆ ಬೀದಿಯಲ್ಲಿ ಕ್ವಾರಣ್ಯ ಬೇಡುತ್ತಿದ್ದಾಗ ಒಬ್ಬ ಮುದುಕ ತಿರಸ್ಕಾರದಿಂದ ಧಣಿಗಳ ಅಪ್ಪಣೆ ಇಲ್ಲದೆ ಬೆಟ್ಟುದ್ದ ಕಬ್ಬಿಣ ಕೊಡಲು ಅವರು ಒಪ್ಪುವುದಿಲ್ಲ. ಆಗ ಸಿದ್ದಪ್ಪಾಜಿ ಪಾಂಚಾಳರನ್ನೇ ಕಬ್ಬಿಣದ ಭಿಕ್ಷೆ ಬೇಡಲು ನಿರ್ಧರಿಸುತ್ತಾರೆ. ಹಾವು ಚೇಳುಗಳನ್ನು ಬಳೆಗಳನ್ನಾಗಿ ಮಾಡಿ ಪಾಂಚಾಳರ ದೊರೆಸಾನಿಯರಿಗೆ ತೊಡಿಸುತ್ತಾನೆ. ಬೆಳೆಗಳಿಗೆ ಪ್ರತಿಯಾಗಿ ಕಬ್ಬಿಣ ಕೆಳುತ್ತಾರೆ. ಕಬ್ಬಿಣ ಕೇಳ್ದವನು ನಮ್ಮನನೇ ಕೇಳ್ದಾಗೆ ಆಗಿಬುಡ್ತು ಅಂದು ಕಾಸು ತಗೊಂಡ್ರೆ ತಗೊ ಇಲ್ಲದಿದ್ದರೆ ಹೊರಟೋಗು ಎನ್ನುತ್ತಾರೆ. ಆಗ

ಅವನು ಅಲ್ಲಿಂದ ಹೊರಬಂದು ದೊರೆಸ್ವಾಮಿಯರಿಗೆ ತೊಡಿಸಿದ ಬಳೆ ಮರಳಿ ಹಾವು ಚೇಳು ಆಗಲೆಂದು ಶಪಿಸಿ ಊರಂಚಿನ ಅರಳೆ ಮರದಡಿ ಕುಳಿತುಕೊಳ್ಳುತ್ತಾನೆ. ಅವನೆಂದಂತೆ ಆ ಬಳೆಗಳು ಹಾವು ಚೇಳು ಆಗಿ ರಾಣಿಯರನ್ನು ಕಾಡುತ್ತವೆ. ವಿಷಯ ತಿಳಿದ ಏಳುಜನ ಪಾಂಚಳ ದೊರೆಗಳು ಸಿದ್ದೂಪ್ಪಾಜಿಯನ್ನು ಕರೆ ತರಿಸಿ ಅವನು ಕಬ್ಬಿಣದ ಕೇಳಿದರೆ ಮಡೀರ್ನ ಕೇಳಿದಾಂಗೆ ಅಂದುಕೊಳ್ಳುತ್ತಾರೆ. ಸಿದ್ದಪ್ಪಾಜಿ ತನ್ನ ಗುರು ಧರೆಗೆ ದೊಡ್ಡವರಿಗೆ ಕಬ್ಬಿಣ ಬೇಕು ಎಂದಾಗ ನಿನ್ನ ಗುರುವಿನ ಸತ್ಯ ನಿನ್ನ ಸತ್ಯ ನಾವು ನೋಡಬೇಕಾದರೆ ನಾವು ಹೇಳಿದಂಥ ಸತ್ಯ ನೀನು ಮಾಡಬೇಕು ಎಂದು ಒಪ್ಪಿಸಿ ಅವನನ್ನು ಮುಗಿಸುವ ಸಂಚಿನಿಂದ ಬಗೆ ಬಗೆಯ ಶಿಕ್ಷೆಯ ಪರೀಕ್ಷೆಗಳನ್ನು ಒಡ್ಡುತ್ತಾರೆ.

ಪಾಂಚಾಳರು
ನಾನು ಯಾರಿಗೆ ಶಿಶುಮಗ
ಆಯ್ತಿನಿ ಅಂದರೆ
ನನ್ನ ಉಳಿಮೆಟ್ಟಿ ಗೆಯ್ದೋ ಇರೊ
ಲಿಂಗ ಯಾವ ತಾವು ಐದೊ

ಅಂತೇವರ ಒಕ್ಕಲು ನಾನಾಗುತೀನಿ ಎಂದು ಪಂಥ ಹೂಡುತ್ತಾರೆ. ಉಳಿಮುಟ್ಟದೆ ಗೆಯ್ದೆ ಇರೋ ಲಿಂಗವೆಂದರೆ ಗುರು ಮಂಟೇಸ್ವಾಮಿಗಳು ಎಂದು ಹೇಳಿದರೂ ಅವರ ತಿಳಿವಿಗೆ ಅದು ಬರುವುದಿಲ್ಲ. ಸಿದ್ದಪ್ಪಾಜಿಯನ್ನು ಕರೆದುಕೊಂಡು ಕಬ್ಬಿಣವನ್ನು ಪಿಕ್ಕಳದಲ್ಲಿ ತಂದು ಭಿಕ್ಷೆ ನೀಡುತ್ತಾರೆ. ಆದರೆ ಸಿದ್ದಪ್ಪಾಜಿ ಅದನ್ನು ಸ್ವೀಕರಿಸಿ ಜೋಳಿಗೆಯಲ್ಲಿಟ್ಟು ಕೊಳ್ಳುತ್ತಾರೆ. ಕಾದಗಟ್ಟಿ ಮೇಲೆ ಏಳುದಿವಸ ಕುಳಿತುಕೊಂಡಿದ್ವೇ ಆದರೆ ನೀನು ಕೇಳಿದಕ್ಕೆ ಒಂಭತ್ತು ಪಟ್ಟು ಹೆಚ್ಚು ಕೊಡುತ್ತೇವೆ. ಎನನುತ್ತಾರೆ ಅದನ್ನು ಗೆಲಲುತ್ತಾರೆ. ಆನೆಗಾತ್ರದ ಕಾದಗಟ್ಟಿಯ ಮೇಲೆ ಏರಬೇಕೆಂದು ಹೇಳುತ್ತಾರೆ. ಏಳುನೂರು ಖಂಡುಗ ಬಿದಿರು ಇದ್ದಿಲು ಹಾಕಿ ತಿದಿ ಜೋರುಮಾಡಿ ಏಳುನೂರು ಒಕ್ಕಲು ಒತ್ತಲು ಸಿದ್ದಯ್ಯ ಭೂಮಿಗೂ ಆಕಾಶಕ್ಕೂ ಒಂದಾಗಿ ಉರಿಯುವ ಬೆಂಕಿಯಲ್ಲಿ ಬೂದಿಯಾಗುತ್ತಾನೆ ಎಂದು ತಿಳಿಯುತ್ತಾರೆ. ಆದರೆ ಇವರು ಒಡ್ಡಿದ ಎಲ್ಲಾ ಪರೀಕ್ಷೆಗಳಲ್ಲಿ ಸಿದ್ದಪ್ಪಾಜಿ ಗೆದ್ದಾಗಲೂ ಪಂಚಾಳರು ಕಬಬಿಣ ಕೊಡಲು ಒಪ್ಪುವುದಿಲ್ಲ. ಅವರನ್ನು ಊರಿಂದ ಆಚೆಗೆ ತಳ್ಳಿಸುತ್ತಾರೆ ಸಿದ್ದಪ್ಪಾಜಿಗೆ ಆದ ಅವಮಾನವನ್ನು ಸಹಿಸದೆ ಗುರುಗಳು ಪಾಂಚಾಳಗೇರಿಗೆ ಮಾರಿ ಮಸಣಿಯನ್ನು ನುಗ್ಗಿಸುತ್ತಾರೆ.

ಏಳುನೂರು ಮಾರಿರಾ ದೇವಾ
ಮುತ್ತಿನ ಜೋಳಿಗೆಯಿಂದ ಬುಟ್ರು
ಮಾ ಗುರು ಮಂಟೇದಲಿಂಗಪ್ಪ
ಏಳುನೂರು ಜನ ಮಾರೀರು ಗುರುವು
ಏನಪ್ಪ ಜಗತ್ತು ಗುರು
ನಮ್ಮ ಎಲಲಿಗೆ ಕಳುಗರಿ
ಯಾತಕೆ ಕಳುಗರಿ
ನೀವು ಒಕ್ಕದ ಮನೆಗೆ ಒಂಟೋಯ್ತಿನ ಎಂದರು
ಕೇಳೀರಮ್ಮಾ ಏಳನೂರು ಜನ ಮಾರೀರೆ
ಹಲಗೂರು ಏಳುಬೀದಿ
ಚಿಲುಪುರ ಏಳುಬೀದಿ
ಏಳೇಳು ಬೀದಿ ಒಳಗೆ
ಕೇಳಿ ನನ್ನ ಕಂದಾ
ಅಮ್ಮ ಹದುನಾಕು ಬೀದಿ
ಜನಗಳ ನನ್ನ ಕಂದಾ
ನಿನಗೆ ಹಾರವಾಗಿ ಕೊಡುತೀನಿ
ಇವರು ಏಳುಜನ ಕಂದಾ
ಪಾಳ್ಳಗಾರ್ರ ಕಂದ
ಬುಟ್ಟು ಬುಡಿ ನನ ಕಂದಾ
ದೊರೆಗಳ ಕಂದಾ
ತಂಟೆಗೆ ಹೋಗಬೇಡಿ
ಈ ಹದಿನಾಲಕು ಗ್ರಾಮ ಬೀದಿ
ಒಂದುನುವೆ ಬುಡಬ್ಯಾಡಿ ॥ ಸಿದ್ಧಯ್ಯ ॥

ಮಾರಿರಯ ಹೊಕ್ಕು ಹಲಗೂರು, ಪಂಚಾಳಗೇರಿಲಿ ಹೇಳಲು ಹೆಸರಿಲ್ಲದೆ ಒಂದು ನರಪಳ್ಳ ಪ್ರಾಣಿಗಳು ಇಲ್ಲದಂತೆ ಬಲಿತೆಗೆದುಕೊಳ್ಳುತ್ತಾರೆ. ಆಗ ಪಾಂಚಾಳರು ಮಂಟೇಸ್ವಾಮಿಗೆ ಶರಣಾಗುತ್ತಾರೆ. ಪಾಳಾಳ ಬಾವಿಗೆ ಹೋಗುವಾಗ ಕಲಿಯನ್ನು ಕಂಡು ಹೆಂಡತಿಯನ್ನು ತಲೆಮೆಲೆ ಕೂರಿಕೊಂಡು ಬರುತ್ತಿದ್ದ ತಂದೆ–ತಾಯಿಯರನ್ನು ಸೇವಕರನ್ನಾಗಿ ಮಾಡಿಕೊಂಡು ಬರುತ್ತಿದ್ದ ಕಲಿಯನನು ಪಾತಳಕ್ಕೆ ತುಳಿದು ಕಲಿಪುರುಷ ಶನಿಯಾಗಿ ಬಾ ಎಂದು ಹೇಳಿ ತಾನು ಪಾತಳಕ್ಕೆ ಹೋಗುತ್ತಾನೆ.

ಅ) ಮಂಟೇಸ್ವಾಮಿಯ ಕಾಲಜ್ಞಾನ

ಸಮಾನತೆಯ ಸಮಾಜವನ್ನು ನಿರ್ಮಿಸಲು ಬೇಕಾದ ಶಿಷ್ಯರನ್ನು ಪಡೆದ ಮಂಟೇಸ್ವಾಮಿ ತಾನು ತಂದ ಕಾಲಜ್ಞಾನದ ಹೊತ್ತಿಗೆಯನ್ನು ಜೋಪಾನ ಮಾಡುತ್ತಾನೆ. ಅದನ್ನು ಯಾರಿಗೂ ಕೊಡಲು ಇಚ್ಛಿಸುವುದಿಲ್ಲ. ಕಾಲಜ್ಞಾನವನ್ನು ತನ್ನ ಮಕ್ಕಳಾದ ತ್ರಿಮೂರ್ತಿಗಳಿಗೆ ಹೇಳಿಕೊಡುವ ಸಂದರ್ಭದಲ್ಲಿ ಬ್ರಹ್ಮನಿಗೆ ಪ್ರತಿ ಮಾಡಿಕೊಳ್ಳಲು ಹೇಳುತ್ತಾನೆ. ತ್ರಿಮೂರ್ತಿಗಳನ್ನು ಕುರಿತು.

ಕಂದಾ ಕಾಲ ಕಳೆಯೋಗಂಟಾ ।
ನನ್ನ ಕಾಲ ಜ್ಞಾನದ ನುಕ್ಕ
ಬಾಳುತದೆ ನನ ಕಂದಾ

ಈ ಕಾಲ ಜ್ಞಾನವ ನೀನು ತಪ್ಪಿ ಬಾಳಲುಬ್ಯಾಡ (ಮಂಟೇಸ್ವಾಮಿ ಕಾವ್ಯ) ಪುಟ ಸಂಖ್ಯೆ ೪೧)

ಈ ಪ್ರಪಂಚ ಇರುವ ತನಕ ನಾನು ಹೇಳಿರುವ ಕಾಲಜ್ಞಾನ ನಡೆಯುತ್ತದೆ ಇಂದಿಗೂ ಬೊಪ್ಪೆಗೌಡನ ಪುರದ ಮಂಟೇಸ್ವಾಮಿ ಗದ್ದುಗೆಯಲ್ಲಿ ಕಾಲಜ್ಞಾನದ ವಚನಗಳಿಗೆ ಪೂಜೆ ಸಲ್ಲಿಸುವುದನ್ನು ನಾವು ನೋಡಬಹುದು ಚಿಕ್ಕಲ್ಲೂರಿನಲ್ಲಿ ಒಂದು ತಿಂಗಳು ಕಾಲ ನಡೆಯುವ ಜಾತ್ರೆಯಲ್ಲಿ ಹಾಗೂ ಕಪ್ಪಡಿಯಲ್ಲಿ ಒಂದು ತಿಂಗಳ ಕಾಲ ನಡೆಯುವ ಜಾತ್ರೆಯ ಸಂದರ್ಭದಲ್ಲಿ ಬೊಪ್ಪೆಗೌಡನ ಪುರದಿಂದ ಕಾಲಜ್ಞಾನದ ಹೊತ್ತಿಗೆಗಳನ್ನು ತೆಗೆದುಕೊಂಡು ಹೋಗಿ ಪೂಜಿಸುವುದನ್ನು ಇಂದಿಗೂ ನಾವು ನೋಡಬಹುದು. ತನ್ನ ಎಲ್ಲಾ ಶಿಷ್ಯರನ್ನು ಮುಂದೆ ಕೂರಿಸಿಕೊಂಡು ಕಾಲಜ್ಞಾನವನ್ನು ಹೇಳುವಾಗ ಮುಂದಿನ ಕಾಲಜ್ಞಾನ ಹೇಳಬೇಕಾ ? ಇಂದಿನ ಕಾಲಜ್ಞಾನ ಹೇಳಬೇಕಾ ಎಂಬ ಪ್ರಶ್ನೆಯನ್ನು ಮುಂದಿಡುತ್ತಾನೆ. ಆಗ ದೊಡ್ಡಮ್ಮತಾಯಿ ಮುಂದೆ ಬರುವ ಕಲಿಯ ಬಗ್ಗೆ ಹೇಳುವಂತೆ ಕೇಳುತ್ತಾಳೆ ಅದರಿಂದ ನಿಮಗೇನು ಪ್ರಯೋಜನ ? ಎನ್ನುತ್ತಾನೆ. ಆಗ ದೊಡ್ಡಮ್ಮ

ನಾಳೆ ದಿವಸ ನಮ್ಮ ಹೊಟ್ಟೇಲಿ ಮಕ್ಕಳು ಹುಟ್ತವೆ !
ಹುಟ್ಟಿದಂಥ ಮಕ್ಕಳಿಗೆ ಏನಂಥ ಹೇಳ್ತಿನಿ ಅಂದರೆ ।
ಇಂತಿಂಥ ಕಲಿಗಾಲ ಬರ್ತದೆ ಕಣ್ರಪ್ಪ ಮಕ್ಕಳೇ ।
ಅಂತು ಬಾಳಿ ಅಂತ ಹೆಳಿ ।

ಹುಟ್ಟಿದ ಮಕ್ಕಳೀಗೆ ಬುದ್ದಿ ಹೇಳ್ಕಂಡು ಬಾಳಿ ಬದುಕ್ತೀವಿ ಸ್ವಾಮಿ ಎಂದು ಹೇಳುತ್ತಾಳೆ.

ಮಂಟೇಸ್ವಾಮಿ ಮುಂದುವರೆದು ಕಲಿಗಾಲದ ಲಕ್ಷಣಗಳನ್ನು ಹೇಳುತ್ತಾರೆ. ಗುರುಗಳ ಮದ್ಯೆ ಗುದ್ದಾಟ ಬರುತ್ತೆ. ಅನ್ಯಾಯ ಹೆಚ್ಚುತ್ತದೆ. ಅಮ್ಮ ಎನನುವ ಕಂದ ಇಲ್ಲದಂತಾಗುತ್ತದೆ. ಕಾವಿ ಹೊದ್ದವರೆಲ್ಲ ಕಳ್ಳರಾಗಿ ತಿರುಗುತ್ತಾರೆ. ದಾಸಯ್ಯರೆಲ್ಲ ದೇಸಾಂತರ ಹೋಗಬೇಕು.......................... ಹರಿವಾಣದಲ್ಲಿ ಉಣ್ಣುವವರು ಹಾಳೆಗೆ ಬರುತ್ತಾರೆ. ರಾಜರಿಗೆಲ್ಲ ಗೋಳಾಟ ಬರುತ್ತದೆ. ಬಡಿದಾಟ ಮಾಡುತ್ತಾ........... ಏಳುವರ್ಷದ ಮಗಳು ಋುಉಮತಿಯಾಗುತ್ತಾಳೆ. ದಲ್ಲಾಳಿಗೆ ಲಾಬ ಗಂಟಿನವನಿಗೆ ಮೂರುನಾಮ ಭೂಮಿಗೆ ಬೆಂಕಿಮಳೆ ಬೀಳುತ್ತದೆ. (ಕಲಿಪುರುಷನ ಸಾಳು ಸಂ.ಹಿ.ಚಿ.ಬೋರಲಿಂಗಯ್ಯ) ಇಂತಹ ಸಂದರ್ಭದ ತಾನು ಇರಲಾರೆ ಪಾತಳಕ್ಕೆ ಹೋಗುತ್ತೇನೆ ಎನ್ನುತ್ತಾನೆ. ಈ ಕಾಲಜ್ಞಾನಕ್ಕೆ ಆ ಸಮಯದಾಯದವರು ತುಂಬಾ ಮಹತ್ವ ನೀಡುತ್ತಾರೆ. ತಳ ಸಮುದಾಯದ ಸಾಂಸ್ಕೃತಿಕ ನಾಯಕನಾಗಿ ಮಂಟೇಸ್ವಾಮಿ ವಿಶೇಷನೆನಿಸಿಕೊಳ್ಳುವುದು ಈ ಕೆಲವು ವಿಚಾರಗಳಿಂದಾಗಿ ಸರ್ವರಿಗೂ ಸಮಬಾಳು ಎಂಬ ಧೋರಣೆ ನಾವಿಲ್ಲಿ ಕಾಣಬಹುದು. ಶ್ರಮ ಸಮುದಾಯದ ಶ್ರಮಸಂಸ್ಕ್ರತಿಯ ಒಔಚಿತ್ಯವನ್ನು ಈ ಕಾವ್ಯ ಸಾರುತ್ತದೆ. ಮೇಲು ಕೀಳೆಂಬ ಅಸಮಾನತೆಯನ್ನು ತೊಡೆದು ಹಾಕುವ ಬಗೆ ಇಲ್ಲಿ ವಿಶೇಷವಾಗಿ ಮೂಡಿಬಂದಿದೆ. ಪವಾಡಗಳು ಉಲ್ಲೇಖವಾಗುವುದು ಅಸಮಾನತೆಯನ್ನು ನಿವಾರಿಸುವ ಸಲುವಾಗಿವೆ.

ಮಂಟೇಸ್ವಾಮಿ ಶೋಷಿತವರ್ಗಕ್ಕೆ ಧ್ವನಿಯಾಗಿ ನಿಲಲುತ್ತಾನೆ. ಪವಾಡಗಳ ಮೂಲಕ ಗೋಚರಿಸುವುದೆನೆಂದರೆ ಸರ್ವಾಧಿಖಾರಿ ಧೋರಣೆಯನ್ನು ತೊಡೆದು ಹಾಕುವುದು ಅವರು ಒಡ್ಡುವ ಸವಾಲುಗಳಿಗೆ ಪ್ರತಿಯಾಗಿ ನಿಲ್ಲುವುದು ಮತ್ತು ಅವರು ಬಗ್ಗದೆ ಇರುವ ಸಂದರ್ಭದಲ್ಲಿ ಶಿಕ್ಷಿಸುವ ಮೂಲಕ ಅವರನ್ನು ದಾರಿಗೆ ತರುವಲ್ಲಿ ಅವರ ಅಹಂ ಅಡಗಿಸಿ ಒಕ್ಕಲನ್ನಾಗಿಸಿಕೊಳ್ಳುವಲ್ಲಿ ಅವು ಸಮಾಪ್ತಿಯಾಗುತ್ತವೆ.

**ಗ್ರಂಥಋಣ**


೧. ಮಂಟೇಸ್ವಾಮಿಕಾವ್ಯ: ಸಂ. ಹೀಚಿ. ಬೋರಲಿಂಗಯ್ಯ, ಕನ್ನಡ ವಿ.ವಿ ಹಂಪಿ

೨. ಕರ್ನಾಟಕ ಜನಪದ ಮಹಾಕಾವ್ಯಗಳು: ಸಂ. ಡಾ.ಲೇ.ನ>ಶಂಕರನಾರಾಯಣ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು-೦೧

೩. ಕಿಲಾರಿ ಜಾಲತಾಣ :